821

ಸಂ. ನಅಇ 112 ಬೆಂಮಪ್ರಾ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 26.5.05

ಸುತ್ತೋಲೆ

ವಿಷಯ: ಖಾಸಗಿ ವಿನ್ಯಾಸ ಅನುಮೋದನೆ, ಅಭಿವೃದ್ಧಿ ಪರಿಶೀಲನೆ ಮತ್ತು ವಿನ್ಯಾಸಗಳಲ್ಲಿಯ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಅನುಸರಿಸಬೇಕಾದ ವಿಧಿ ವಿಧಾನ.

ಉಲ್ಲೇಖ: 1. ಸರ್ಕಾರದ ಸುತ್ತೋಲೆಯ ಕ್ರ.ಸಂಖ್ಯೆ: ನಅಇ 104(1) ಬೆಂಮಪ್ರಾ 2005 ದಿ:09-05-2005.

2. ಸರ್ಕಾರದ ಸುತ್ತೋಲೆಯ ಕ್ರ.ಸಂಖ್ಯೆ: ನಅಇ 104(2) ಬೆಂಮಪ್ರಾ 2005 ದಿ:09-05-2005.

3. ಸರ್ಕಾರದ ಸುತ್ತೋಲೆ ಕ್ರ.ಸಂ. ನಅಇ 104(3) ಬೆಂಮಪ್ರಾ 2005 ದಿ:09-05-2005.

4. ಸರ್ಕಾರದ ಸುತ್ತೋಲೆಯ ಕ್ರ.ಸಂ. ನಅಇ 104(4) ಬೆಂಮಪ್ರಾ 2005 ದಿ:09-05-2005.

5. ಸರ್ಕಾರದ ಅಧಿಸೂಚನೆಯ ಕ್ರ.ಸಂ. ಕಂಇ 174 ಮುನೋಮು 2005 ದಿ:13-04-2005.

— — —

581 325
109
09/06/05

ಸರ್ಕಾರದ ಉಲ್ಲೇಖಿತ 1 ರಿಂದ 4ರ ಸುತ್ತೋಲೆಗಳಲ್ಲಿ ಖಾಸಗಿ ವಿನ್ಯಾಸಗಳ ಅನುಮೋದನೆ, ಅಭಿವೃದ್ಧಿ ಪರಿಶೀಲನೆ ಮತ್ತು ಅನುಮೋದಿತ ವಿನ್ಯಾಸಗಳನ್ನು ಬಿಡುಗಡೆ ಮಾಡುವ ಕುರಿತು ವಿಧಾನವನ್ನು ವಿವರಿಸಲಾಗಿದೆ. ಸರ್ಕಾರದ ಉಲ್ಲೇಖಿತ (5)ರ ಅಧಿಸೂಚನೆಯನ್ನು ಹೊರಡಿಸಿ ರಾಜ್ಯದಲ್ಲಿ ನಿವೇಶನಗಳನ್ನು ನೋಂದಣಿ ಮಾಡಲು ಅನುಸರಿಸಬೇಕಾದ ಕ್ರಮ ಮತ್ತು ನೋಂದಣಿ ಸಮಯದಲ್ಲಿ ನೋಂದಣಿ ಅಧಿಕಾರಿಗಳು ಪಡೆಯಬೇಕಾದ ದಾಖಲೆಗಳ ಕುರಿತು ಸಹ ನಿರ್ದೇಶನ ನೀಡಲಾಗಿದೆ. ಇದೇ ಸುತ್ತೋಲೆಯಲ್ಲಿ ವಿನ್ಯಾಸ ಅನುಮೋದನೆಯಾದ ನಂತರ ನಿವೇಶನ ಬಿಡುಗಡೆಯ ಕುರಿತು ಸ್ಥಳೀಯ ಯೋಜನಾ ಪ್ರಾಧಿಕಾರಗಳಿಂದ ದಾಖಲೆಗಳನ್ನು ಪಡೆದು ನಿವೇಶನಗಳನ್ನು ನೋಂದಾಯಿಸುವ ಬಗ್ಗೆ ಸೂಚನೆ ನೀಡಲಾಗಿದೆ. ಸರ್ಕಾರದ ಉಲ್ಲೇಖಿತ (1 ರಿಂದ 4)ರ ಸುತ್ತೋಲೆಗಳ ನಿರ್ದೇಶನಗಳನ್ನು ಪುನರುಚ್ಚರಿಸುತ್ತಾ, ನಿವೇಶನಗಳನ್ನು ಬಿಡುಗಡೆಗೊಳಿಸುವ ಪ್ರಯುಕ್ತ ಈ ಕೆಳಗಿನ ಮಾರ್ಗಸೂಚಿಯನ್ನು ಅನುಸರಿಸಲು ನಗರಾಭಿವೃದ್ಧಿ ಪ್ರಾಧಿಕಾರಗಳು, ಯೋಜನಾ ಪ್ರಾಧಿಕಾರಗಳು ಮತ್ತು ರಾಜ್ಯದಲ್ಲಿಯ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿದೆ.

1. ವಿನ್ಯಾಸಗಳನ್ನು ಬಿಡುಗಡೆ ಮಾಡುವಾಗ ವಿನ್ಯಾಸದ ಬೇರೆ ಬೇರೆ ಭಾಗಗಳಲ್ಲಿ ಹರಡಿದಂತೆ ಶೇಕಡಾ 60ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು. ಈ ರೀತಿ ಬಿಡುಗಡೆ ಮಾಡುವಾಗ ಅರ್ಜಿದಾರರಿಂದ ವಿನ್ಯಾಸವನ್ನು ಎರಡು(2) ವರುಷದೊಳಗಾಗಿ ಅಥವಾ ನಗರಾಭಿವೃದ್ಧಿ ಪ್ರಾಧಿಕಾರಗಳು : ನಗರ ಯೋಜನಾ ಪ್ರಾಧಿಕಾರಗಳು: ಸ್ಥಳೀಯ ಸಂಸ್ಥೆಯು ನಿಗದಿಪಡಿಸುವ ಅವಧಿಯೊಳಗಾಗಿ (ಅವಧಿ 5 ವರ್ಷಕ್ಕೆ ಮೀರತಕ್ಕದ್ದಲ್ಲ) ಅಭಿವೃದ್ಧಿ ಪಡಿಸತಕ್ಕದ್ದು.

2. ಉಳಿದ ಶೇಕಡಾ 40ರಷ್ಟು ನಿವೇಶನಗಳನ್ನು ವಿನ್ಯಾಸ ಸಂಪೂರ್ಣವಾಗಿ ಅಭಿವೃದ್ಧಿಗೊಂಡ ನಂತರ ಬಿಡುಗಡೆಗೊಳಿಸುವುದು.

9/6/05

3. ಈ ನಿಗದಿತ ಅವಧಿಯೊಳಗೆ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ವಿನ್ಯಾಸದ ಮಾಲೀಕರು ಪೂರ್ಣಗೊಳಿಸದೇ ಇದ್ದಲ್ಲಿ, ಉಳಿದ ಅಭಿವೃದ್ಧಿ ಕಾಮಗಾರಿಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ:ನಗರ ಯೋಜನಾ ಪ್ರಾಧಿಕಾರ:ಸ್ಥಳೀಯ ಸಂಸ್ಥೆಯೇ ಕೈಗೊಳ್ಳತಕ್ಕದ್ದು. ಇದಕ್ಕೆ ತಗಲುವ ವೆಚ್ಚವನ್ನು ಉಳಿದ ಶೇಕಡ 40ರಷ್ಟು ನಿವೇಶನಗಳನ್ನು ಮಾರಿ ಬಂದ ಹಣದಿಂದ ಭರಿಸತಕ್ಕದ್ದು. ಇದಕ್ಕೆ ಅನುವಾಗಲು ವಿನ್ಯಾಸದ ಮಾಲೀಕರು ಮೇಲಿನ ಶರತ್ತನ್ನು ಅನುಸರಿಸದೇ ಇದ್ದಲ್ಲಿ, ಉಳಿದ ಶೇಕಡಾ 40ರಷ್ಟು ನಿವೇಶನಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ:ನಗರ ಯೋಜನಾ ಪ್ರಾಧಿಕಾರ:ಸ್ಥಳೀಯ ಸಂಸ್ಥೆಗೆ ಮುಕ್ತಯವಾಗಿ ಹಸ್ತಾಂತರಿಸುವ ಕುರಿತು ಮುಚ್ಚಳಿಕೆ ಪತ್ರ ಬರೆದುಕೊಡತಕ್ಕದ್ದು. ನಗರಾಭಿವೃದ್ಧಿ ಪ್ರಾಧಿಕಾರ:ನಗರ ಯೋಜನಾ ಪ್ರಾಧಿಕಾರ:ಸ್ಥಳೀಯ ಸಂಸ್ಥೆಯು ಈ ರೀತಿಯಾಗಿ ವಿನ್ಯಾಸ ಅಭಿವೃದ್ಧಿ ಪಡಿಸಿದ ನಂತರ ಉಳಿಯಬಹುದಾದ ಮೊತ್ತವನ್ನು ವಿನ್ಯಾಸದ ಮಾಲೀಕರಿಗೆ ಹಿಂತಿರುಗಿಸತಕ್ಕದ್ದು.

4. ಉಪ ವಿಭಜನೆಗಳಿಲ್ಲದ ವಸತಿ ಮತ್ತು ವಸತಿಯೇತರ ಏಕ ನಿವೇಶನಗಳಿಗೆ ಅನುಮೋದನೆ ನೀಡುವಾಗ ವಿನ್ಯಾಸ ಅನುಮೋದನೆ ನೀಡುವ ಸಮಯದಲ್ಲಿ ವಿಧಿಸಲಾದ ಶರತ್ತುಗಳನ್ನು ಪೂರೈಸಿದ ನಂತರ ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು.

5. ವಿನ್ಯಾಸಗಳಲ್ಲಿಯ ನಿವೇಶನಗಳನ್ನು ಬಿಡುಗಡೆ ಮಾಡುವಾಗ ಬಿಡುಗಡೆಯ ಪ್ರಮಾಣ ಪತ್ರದಲ್ಲಿ ನಿವೇಶನಗಳ ಸಂಖ್ಯೆ ಮತ್ತು ನಂಬರುಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು ಹಾಗೂ ಸುತ್ತೋಲೆಗೆ ಲಗತ್ತಿಸಿದ ನಮೂನೆ 1 ಮತ್ತು 2 ರಲ್ಲಿ ಸಂದರ್ಭಕ್ಕನುಗುಣವಾಗಿ ನಿವೇಶನಗಳ ಬಿಡುಗಡೆಯ ಪ್ರಮಾಣ ಪತ್ರ ನೀಡತಕ್ಕದ್ದು.

(ವಿ.ಶ್ರೀಧರಮೂರ್ತಿ)
ಅಧೀನ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ

..ನಕಲು..

ನಂ.ನಯೋ:ಪಿ:(ಕೇ.ಕಾ)ಮು:(61):05-05.

ನಗರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, ಬೆಂಗಳೂರು
ದಿನಾಂಕ:

ಯಥಾಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ:

1. ನಗರ ಯೋಜನಾ ಜಂಟಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ ಮತ್ತು ವಿಭಾಗೀಯ ಕಛೇರಿ, ಮೈಸೂರು ಹಾಗೂ ಗುಲ್ಬರ್ಗ.
2. ಎಲ್ಲಾ ಶಾಖಾ ಕಛೇರಿಗಳಿಗೆ
3. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮತ್ತು ತಾಂತ್ರಿಕ ಸಿಬ್ಬಂದಿಗಳಿಗೆ

ನಗರ ಯೋಜನಾ ನಿರ್ದೇಶಕರ ಪರವಾಗಿ